

ಮೈಸೂರ ಗೆಜೆಟ.

ವಿಶೇಷ ಪತ್ರಿಕೆ.

ಸರ್ಕಾರದಿಂದ ಪ್ರಯಿಷ್ಠಿದ್ದು.

ಬೆಂಗಳೂರು, ಸೋಮವಾರ, ಜನವರಿ ತಾ|| 21, ಸ್ಯ 1895.

ಇಸ್ತಿಹಾರ್ನಾಮೆ.

ತಾರೀಖು 20ನೇ ಜನವರಿ 1895.

ನಂ. 418—D. H. O. 1895ನೇ ಇಸವಿ ಫಿಬ್ರವರಿ 1ನೇ ಮಂಗಳವಾರ ದಿವಸ ನಡೆಯುವ ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರ ಪಟ್ಟಾಭಿಷೇಕಮಹೋತ್ಸವದ ಮರ್ಯಾದಾರ್ಥವಾಗಿ ಈ ಸಂಸ್ಥಾನದ ತಮಾಂ ಪಬ್ಲಿಕ್ ಆಫೀಸುಗಳೂ ಕೋರ್ಟುಗಳೂ ವ ಸ್ಕೂಲ್‌ಗಳೂ ಸುದಾ 1895ನೇ ಇಸವಿ 30ನೇ ಜನವರೀ ಬುಧವಾರದಾರಭ್ಯ ಫಿಬ್ರವರೀ 2ನೇ ಶನಿವಾರ ಪರ್ಯಂತ (ಉಭಯದಿವಸಗಳೂ ಶೇರಿ) ಬರಖಾಸ್ತು ಮಾಡಲ್ಪಡತಕ್ಕದ್ದು.

2. ಸದರೀ ಕಾಲದಲ್ಲಿ ಜರೂರಿಯಾತ್ ಕೆಲಸ ನಡೆಯುವ ಬಗ್ಯಾಗಿ ಆಯಾ ಇಲಾಖೆ ಮೊಖ್ತೇಸರರು ತಕ್ಕ ವಿಚಾರಣೆ ಮಾಡತಕ್ಕದ್ದು.

3. ಸರ್ಕಾರ ಖಜಾನೆಗಳ ವಿಷಯದಲ್ಲಿ, ಕಾಂಟ್ರೋಲರವರು ಜನಗಳಿಗೆ ಅನಾನುಕೂಲವಾಗದ ರೀತ್ಯಾ ಅವಶ್ಯಕವಾದ ಹುಕುಂ ಕೊಡತಕ್ಕದ್ದು.

ಹುಕುಂ ಬಮೋಜಿಬ್,

ಟಿ. ಆನಂದರಾವ್,

ಜೀಫ್ ಸೆಕ್ರೆಟರಿ.

MYSORE GOVERNMENT CENTRAL PRESS, BANGALORE.—1895.